## ವಿಷಯ: ಶಿಕ್ಷಣಶಾಸ್ತ್ರದ ಶಾಲಾ ವಿಷಯ – ಸಮಾಜ ವಿಜ್ಞಾನ

ಘಟಕ: 01

## ಸಮಾಜ ವಿಜ್ಞಾನದ ಅರ್ಥ ಮತ್ತು ಸ್ವರೂಪ

## 1.1 Meaning, Nature and Scope of Social Science:

– ಸಮಾಜ ವಿಜ್ಞಾನದ ಅರ್ಥ, ಸ್ವರೂಪ ಮತ್ತು ವ್ಯಾಪ್ತಿ

**ಅರ್ಥ**

- ಮಾನವ ಸಮಾಜದ ಸದಸ್ಯರ ನಡುವಿನ ಅಂತರ್ ಸಂಬಂಧ ಮತ್ತು ಸಮಾಜದ ಕಾರ್ಯಗಳನ್ನು ಅಧ್ಯಯನದ ಅಂಶಗಳನ್ನಾಗಿರಿಸಿಕೊಂಡ ವಿಜ್ಞಾನದ ಶಾಖೆಯೇ ಸಮಾಜ ವಿಜ್ಞಾನ.
- ಮಾನವ ಸಮಾಜದ ಅಧ್ಯಯನವೇ ಸಮಾಜ ವಿಜ್ಞಾನ.
- ಮಾನವನ ವರ್ತನೆ ಮತ್ತು ಸಮಾಜವನ್ನು ಅಧ್ಯಯನ ವಿಷಯವನ್ನಾಗಿರಿಸಿಕೊಂಡ ಪ್ರತ್ಯೇಕ ಕ್ಷೇತ್ರವೇ ಸಮಾಜ ವಿಜ್ಞಾನ.
- ಸಮಾಜದ ಸದಸ್ಯರ ನಡುವಿನ ಒಡನಾಟವನ್ನು ಹಾಗೂ ಸಂಸ್ಕೃತಿಯ ವಿಕಾಸ ಹೇಗಾಯಿತು ಎಂಬುದನ್ನು ಪರೀಕ್ಷಿಸುವ ಶೈಕ್ಷಣಿಕ ಶಾಸ್ತ್ರವೇ ಸಮಾಜ ವಿಜ್ಞಾನ.
- ಸಮಾಜೋ–ಸಾಂಸ್ಕೃತಿಕ ಅಂಶಗಳನ್ನು ತನ್ನ ಅಧ್ಯಯನ ಕ್ಷೇತ್ರವನ್ನಾಗಿರಿಸಿಕೊಂಡ ವಿಜ್ಞಾನದ ಶಾಖೆಯೇ ಸಮಾಜ ವಿಜ್ಞಾನ.

ಇತಿಹಾಸ, ಪೌರನೀತಿ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ ಮತ್ತು ಭೂಗೋಳ ಮುಂತಾದವುಗಳು ಸಮಾಜ ವಿಜ್ಞಾನದ ಶಾಖೆಗಳಾಗಿವೆ.

- **ವ್ಯಾಖ್ಯೆ**

- "ಮಾನವ ಸಮಾಜದ ಉಗಮ, ಸಂಘಟನೆ ಮತ್ತು ಬೆಳವಣಿಗೆಗೆ ಸಂಬಂಧಿಸಿದ, ವಿಶೇಷವಾಗಿ ಸಮಾಜದ ಸದಸ್ಯರ ನಡುವಿನ ಸಂಬಂಧದ ಅಧ್ಯಯನ ಶಾಖೆಯೇ ಸಮಾಜ ವಿಜ್ಞಾನ." – **ಬೈನಿಂಗ್ & ಬೈನಿಂಙ್**
- "ಕಲ್ಲು, ಕೋಲು, ನಕ್ಷತ್ರ ಮತ್ತು ಭೌತಿಕ ವಸ್ತುಗಳಿಂದ ಭಿನ್ನವಾಗಿರುವಂತಹ ಮಾನವಿಕ ವಿಷಯಗಳನ್ನು ಆಲೋಚಿಸುವಂತಹ ಜ್ಞಾನದ ಶಾಖೆಯೇ ಸಮಾಜ ವಿಜ್ಞಾನ." – **ಚಾರ್ಲ್ಸ್ ಬಿಯರ್ಡ್**

- "ಸಾಮಾಜಿಕ ಪ್ರಕ್ರಿಯೆಯನ್ನು ನಿರ್ಮಿಸುವ ದೈಹಿಕ ಮತ್ತು ಮಾನಸಿಕ ಕ್ರಿಯೆಗಳ ನಿರಂತರ ಹಾಗೂ ಅನ್ಯೋನ್ಯ ಕಲಿಕಾ ಸಂಬಂಧಗಳನ್ನು ಅಭ್ಯಸಿಸುವುದೇ ಸಮಾಜ ವಿಜ್ಞಾನ." – **ಜೇಮ್ಸ್ ಹೈ**

**ಸ್ವರೂಪ**

- ಸಮಾಜ ವಿಜ್ಞಾನವು ಮಾನವರು ಮತ್ತು ಅವರು ವಾಸಿಸುವ ಸಮಾಜದ ಪರಿಸರದ ನಡುವಿನ ಅಂತರ್–ಸಂಬಂಧ ಹಾಗೂ ವಿಕಾಸದ ಬಗ್ಗೆ ತಿಳಿಸುವುದು.
- ಸೈದ್ಧಾಂತಿಕ ನೆಲೆಗೆ ಹೆಚ್ಚು ಒತ್ತು ನೀಡುತ್ತದೆ. ಇದರ ಅನ್ವಯಿಕ ಭಾಗವೇ ಸಾಮಾಜಿಕ ಅಭ್ಯಾಸವಾಗಿದೆ.
- ಕೇವಲ ಗತಕಾಲದ ಘಟನೆಗಳಿಗೆ ಮಾತ್ರ ಸೀಮಿತವಾಗಿರದೇ ವರ್ತಮಾನ ಹಾಗೂ ಸಮಕಾಲೀನ ಸಮಸ್ಯೆಗಳನ್ನು ಒಳಗೊಂಡಂತೆ ತಿಳಿಸುತ್ತದೆ.

- ತನ್ನ ಎಲ್ಲಾ ಉಪಶಾಖೆಗಳಾದ ಇತಿಹಾಸ, ಪೌರನೀತಿ, ಭೂಗೋಳ, ರಾಜಕೀಯ ಶಾಸ್ತ್ರ, ಅರ್ಥಶಾಸ್ತ್ರ, ಮನಶಾಸ್ತ್ರ, ವೇದಾಂತ ಮತ್ತು ಶಿಕ್ಷಣಗಳ ಎಲ್ಲಾ ರೀತಿಯ ಜ್ಞಾನವನ್ನು ಸಮಗ್ರೀಕರಿಸಿ ತಿಳಿಸುವ ಕಾರ್ಯ ಮಾಡುತ್ತದೆ.
- ಸಮಾಜದಲ್ಲಿನ ಮಾನವನ ವೈವಿಧ್ಯಮಯ ಮಾನವಿಕ ಸಂಬಂಧಗಳನ್ನು ಕುರಿತಂತೆ ಪರಿಶೋಧನಾ ಕಾರ್ಯ ಮಾಡುತ್ತದೆ.
- ಮಾನವ ಸಮಾಜದ ಉಗಮ, ಸಂಘಟನೆ ಮತ್ತು ಬೆಳವಣಿಗೆಯನ್ನು ತಿಳಿಸುವ ಶಾಸ್ತ್ರವಾಗಿದೆ.
- ಸಮಾಜದ ಆಚಾರ–ವಿಚಾರ, ಸಂಸ್ಕೃತಿ–ಸಂಪ್ರದಾಯಗಳನ್ನು ಅಭ್ಯಶಿಸುತ್ತದೆ.
- ಮಾನವನ ಜೀವನದ ವಿವಿಧ ಚಟುವಟಿಕೆಗಳು ಮತ್ತು ವಸ್ತು ವಿಷಯಗಳೆಲ್ಲವನ್ನು ತಿಳಿಸುವಂತಹ ಕಾರ್ಯ ಮಾಡುತ್ತದೆ.
- ಇತಿಹಾಸ ಮಾನವನ ಅರ್ಥವತ್ತಾದ ಜೀವನದ ಕಥೆಯಾಗಿದೆ.
- ಇದು ಕಾಲಾನ್ವಯಿತ ಮಾನವನ ಪ್ರಗತಿಯ ಅಧ್ಯಯನವಾಗಿದೆ.

**Scope: ವ್ಯಾಪ್ತಿ:**

- ವ್ಯಾಪ್ತಿ ಎಂದರೆ ಯಾವುದಾದರೊಂದು ಜ್ಞಾನ ಶಾಖೆಯಿಂದ ಕಾಪಾಡಲ್ಪಡಬಹುದಾದ ವಸ್ತು ವಿಷಯ.
- ವ್ಯಾಪ್ತಿ ಎಂದರೆ ಕ್ಷೇತ್ರ ವೈಶಾಲ್ಯ, ವಿಷಯದ ಹರವು, ಅಧ್ಯಯನ ಮೇರೆಗಳು ಎಂದರ್ಥ.
- ಸಮಾಜ ವಿಜ್ಞಾನವು ಮಾನವಿಕ ಸಂಬಂಧಗಳ ಜಾಲವನ್ನು ಕುರಿತ ಅಭ್ಯಾಸವಾಗಿದೆ.
- ತನ್ನ ಉಪ ವಿಷಯಗಳ ಅತ್ಯವಶ್ಯಕ ಕನಿಷ್ಠ ತಮ್ಮ ಕಾರ್ಯಾರ್ಥ ಜ್ಞಾನವನ್ನು ಸಂಗ್ರಹಿಸಿಕೊಡುತ್ತದೆ.
- ಪ್ರಚಲಿತ ಘಟನೆ ಮತ್ತು ಅಂತರಾಷ್ಟ್ರೀಯ ವಿಷಯಗಳನ್ನು ಕುರಿತು ಅಧ್ಯಯನ ಮಾಡುತ್ತದೆ.
- ಆರಂಭದಲ್ಲಿ ಇದರ ಅಧ್ಯಯನವು ಮನೆಯ ವಿಷಯಗಳಿಂದ ಪ್ರಾರಂಭವಾಗಿ ಹಂತ–ಹಂತವಾಗಿ ಅಂತರಾಷ್ಟ್ರೀಯ ಮಟ್ಟದವರೆಗೂ ವ್ಯಾಪಿಸಿದೆ.

---

- ವಿಷಯವನ್ನು ತಾರ್ಕಿಕವಾಗಿ ಮತ್ತು ಹಂತ ಹಂತವಾಗಿ ತಿಳಿಸುವ ಮೂಲಕ ವಿದ್ಯಾರ್ಥಿಯ ಪ್ರಸ್ತುತ ಸಮಾಜಿಕ ವಾತಾವರಣಕ್ಕೆ ತನಗೆ ತಾನೇ ಸರಿಹೊಂದುವಂತೆ ಮಾಡಿ ಅಂತಿಮವಾಗಿ ಪ್ರಜಾಸತ್ತಾತ್ಮಕ ಸಾಮಾಜಿಕ ಜೀವನವು ಶಾಂತಿಯಿಂದ ಕೂಡಿರುವಂತೆ ಮಾರ್ಗ ಕಲ್ಪಿಸುವುದಾಗಿದೆ.
- ಇದು ಇಡೀ ನಾಗರೀಕತೆಗಳ ವ್ಯಾಪಕ ವರ್ಣನೆ ನೀಡುತ್ತದೆ.
- ಘಟನೆಗಳ ಪರಸ್ಪರ ಸಂಬಂಧವನ್ನು ಮತ್ತು ಅವು ಜೀವನದ ಮೇಲೆ ಬೀರುವ ಪ್ರಭಾವವನ್ನು ತಿಳಿಸುತ್ತದೆ.
- ಇದು ಜನತೆ, ಕಾಲ, ಸ್ಥಳ ಮತ್ತು ಭಾವನೆಗಳು ಎಂಬ 4 ಆಯಾಮಗಳ ಬಗ್ಗೆ ಸ್ಪಷ್ಟ ಚಿತ್ರಣ ನೀಡುತ್ತದೆ.
- ಮಾನವ ಅನಾಗರೀಕತೆಯಿಂದ ನಾಗರೀಕತೆಯೆಡೆಗೆ ಸಾಗಿ ಬಂದ ದಾರಿಯನ್ನು ತಿಳಿಸುತ್ತದೆ.

**ಸಮಾಜ ವಿಜ್ಞಾನದ ವ್ಯಾಪ್ತಿಗೆ ಸಂಬಂಧಿಸಿದ 10 ಮುಖ್ಯ ಸಂಗತಿಗಳೆಂದರೆ,**

- ಸಂಸ್ಕೃತಿ
- ಕಾಲ, ನಿರಂತರತೆ ಮತ್ತು ಬದಲಾವಣೆ
- ಜನತೆ, ಸ್ಥಳ ಮತ್ತು ಪರಿಸರ
- ವ್ಯಕ್ತಿ, ಅಭಿವೃದ್ಧಿ ಮತ್ತು ಅಸ್ತಿತ್ವ
- ವ್ಯಕ್ತಿ, ಗುಂಪು ಮತ್ತು ಸಂಘ ಸಂಸ್ಥೆಗಳು
- ಶಕ್ತಿ, ಅಧಿಕಾರ ಮತ್ತು ಆಡಳಿತ
- ಉತ್ಪಾದನೆ, ವಿತರಣೆ ಮತ್ತು ವಿಚಾರ
- ವಿಜ್ಞಾನ, ತಂತ್ರಜ್ಞಾನ ಮತ್ತು ಸಮಾಜ
- ವಿಶ್ವ ಸಂಪರ್ಕ
- ಪೌರ ಜ್ಞಾನ ಮತ್ತು ಅಭ್ಯಾಸ